ಕರ್ನಾಟಕ ಸರ್ಕಾರ

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ/02/ಐಐಐ/2009

ನಿರ್ದೇಶಕರ ಕಚೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು–560 001
ದಿನಾಂಕ: 23ನೇ ಜುಲೈ 2010

**ಜ್ಞಾಪನ**

ವಿಷಯ: ಆಪ್ತ ಮಿತ್ರ ಕಾರ್ಯಕ್ರಮವನ್ನು ಮುಂದುವರೆಸುವ ಬಗ್ಗೆ.
ಉಲ್ಲೇಖ: ಈ ಕಚೇರಿಯ ಪತ್ರ ಸಮಸಂಖ್ಯೆ ದಿನಾಂಕ: 12–08–2009 ಮತ್ತು 13–10–2009.

* * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಪತ್ರದಲ್ಲಿ ರಾಜ್ಯದಲ್ಲಿ ಹೊಸದಾಗಿ ಪ್ರಾರಂಭಿಸಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು / ಪಾಲಿಟೆಕ್ನಿಕ್‌ಗಳು ಸ್ಥಳೀಯವಾಗಿರುವ ಅಥವಾ ಸಮೀಪವಿರುವ ಸರ್ಕಾರಿ / ಖಾಸಗಿ / ಅನುದಾನಿತ ಖಾಸಗಿ / ಇಂಜಿನಿಯರಿಂಗ್ ಕಾಲೇಜುಗಳು ಅಥವಾ ಪಾಲಿಟೆಕ್ನಿಕ್‌ಗಳೊಂದಿಗೆ ಮೂರು ವರ್ಷಗಳ ಕಾಲ ಒಡಂಬಡಿಕೆ (MOU) ಮಾಡಿಕೊಂಡು, ವಿದ್ಯಾರ್ಥಿಗಳಿಗೆ ಉತ್ತಮ ಮೂಲಭೂತ ಸೌಕರ್ಯ, ಗುಣಾತ್ಮಕ ಶಿಕ್ಷಣವನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನೀಡಲು ಸೂಚಿಸಲಾಗಿದೆ. ಆಪ್ತಮಿತ್ರ ಕಾರ್ಯಕ್ರಮವು 2009–10ನೇ ಶೈಕ್ಷಣಿಕ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲು ಸಹಕಾರಿಯಾಗಿರುತ್ತದೆ.

2010–11ನೇ ಸಾಲಿನ ಶೈಕ್ಷಣಿಕ ವರ್ಷವು ಜುಲೈ ತಿಂಗಳ 15 ರಿಂದ ಪ್ರಾರಂಭವಾಗಿರುವುದರಿಂದ ವಿದ್ಯಾರ್ಥಿಗಳಿಗೆ ಕಳೆದ ವರ್ಷಕ್ಕಿಂತ ಹೆಚ್ಚಿನ ಮೂಲಭೂತ ಸೌಕರ್ಯ ಹಾಗೂ ಗುಣಾತ್ಮಕ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಮಾಡಿಕೊಂಡಿರುವ ಒಡಂಬಡಿಕೆ (MOU) ವನ್ನು ಮುಂದುವರೆಸುತ್ತಾ, ಅವಶ್ಯವಿರುವ ಮತ್ಯಾವುದೇ ಸಂಸ್ಥೆಯೊಂದಿಗೆ ಒಡಂಬಡಿಕೆ (MOU) ಮಾಡಿಕೊಂಡು, ಒಡಂಬಡಿಕೆ ಪತ್ರವನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವುದು. 2009–10ನೇ ಸಾಲಿನಲ್ಲಿ ಒಡಂಬಡಿಕೆ (MOU) ಮಾಡಿಕೊಂಡು, ಮೂಲಭೂತ ಸೌಕರ್ಯ ಹಾಗೂ ಇತರೇ ಸವಲತ್ತುಗಳನ್ನು ನೀಡಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಲು ಸಹಕರಿಸಿದ ಸರ್ಕಾರಿ / ಅನುದಾನಿತ / ಖಾಸಗಿ ಇಂಜನಿಯರಿಂಗ್ ಕಾಲೇಜುಗಳು / ಪಾಲಿಟೆಕ್ನಿಕ್‌ಗಳಿಗೆ ನಿಮ್ಮ ಹಂತದಲ್ಲೇ ಧನ್ಯವಾದ ಪತ್ರಗಳನ್ನು ಬರೆಯುವಂತೆ ಸೂಚಿಸಲಾಗಿದೆ. ಈ ಸಂಬಂಧವಾಗಿ ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಐಐಐ ಘಟಕ, ಇವರನ್ನು ಸಂಪರ್ಕಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

**ಸಂಪರ್ಕಿಸುವ ಅಧಿಕಾರಿ:**
ಶ್ರೀ ರಾಜು, ಉಪನಿರ್ದೇಶಕರು [ಐಐಐ] ಘಟಕ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು – 1. ಮೊಬೈಲ್ ಸಂಖ್ಯೆ: 9482225722.

ನಿರ್ದೇಶಕರು

**ಪ್ರತಿ:**

1. 2008–09 ಮತ್ತು 2009–10ನೇ ಸಾಲಿನಲ್ಲಿ ಪ್ರಾರಂಭವಾದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್/ ಇಂಜನಿಯರಿಂಗ್ ಕಾಲೇಜುಗಳ ಪ್ರಿನ್ಸಿಪಾಲರುಗಳಿಗೆ.
2. ಉಪ ನಿರ್ದೇಶಕರು, ಐಐಐ [ಘಟಕ], ಮಾಹಿತಿಗಾಗಿ.
3. ಕಡತಕ್ಕೆ.